**ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ.**

**ಸಿ ಸಿ ನಂ.1566/2022**

ಪಿ ಸಿ ಎ ಆರ್ ಡಿ ಬ್ಯಾಂಕ ನಿ. ಕುಮಟಾ

..... ಫಿರ್ಯಾದಿ

ವಿರುದ್ಧ

ಸವಿತಾ ಗಣಪತಿ ತನ್ಮಡಗಿ ...... ಆರೋಪಿ

ಆರೋಪಿಯ ಹೆಸರು - ಸವಿತಾ ಗಣಪತಿ ತನ್ಮಡಗಿ

ವಯಸ್ಸು - ವರ್ಷ

ವಾಸ್ತವ್ಯ - ದಿವಗಿ, ಕುಮಟಾ

**ದಿನಾಂಕಃ 23.12.2022**

# ಆರೋಪಣೆ

ಆರೋಪಿಯಾದ ನೀವು ಫಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಗಾಗಿ ಎಸ್ ಬಿ. ಆಯ್, ಕುಮಟಾ ಶಾಖೆಯ ಚೆಕ್ ನಂಃ 846012 ನೇದನ್ನು ದಿನಾಂಕಃ 6.4.2022 ರಂದು ರೂ.1,97,800/-ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿ ಸಂಸ್ಥೆಯವರು ಸದ್ರಿ ಚೆಕನ್ನು ನಗಧೀಕರಣಕ್ಕಾಗಿ ತಮ್ಮ ಸಂಸ್ಥೆಯ ಖಾತೆ ಇರುವ ಬ್ಯಾಂಕಗೆ ಹಾಜರುಪಡಿಸಿದಾಗ ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇರುವುದಿಲ್ಲ (Funds Insufficient) ಅಂತಾ ಹಿಂಬರಹವನ್ನು ನೀಡಿ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ತಾಃ 4.5.2022 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸಿಯೂ, ಉತ್ತರವನ್ನು ನೀಡದೇ ಹಾಗೂ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈಗ ನಿಮಗೆ ಮೇಲೆ ಓದಿ ಹೇಳಿದ ಆರೋಪಣೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ ?

ಉತ್ತರಃ

sd/-

**ಪ್ರಧಾನ ಪ್ರ.ದ.ನ್ಯಾ ದಂಡಾಧಿಕಾರಿ,**

**ಕುಮಟಾ.**